ಶ್ರೀ ಕೆ. ಹೆಚ್. ರಂಗನಾಥ್.—ಅಪರಾಧ ಆಗಿದೆ ಎಂದು ಕಂಡುಬಂದರೆ ತನಿಖೆ ಮಾಡಿಸುತ್ತೇನೆ. ಅದನ್ನು ಎಸ್‌ಕ್ವಾಯರಿ ಮಾಡಿಸಿ, ಅದು ಮೇಲ್ನೋಟಕ್ಕೆ ಸಾಬೀತು ಆದರೆ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ನಮ್ಮ ಕಡೆಯ ಜನರಿಗೆ ಯಾವುದೇ ಸವಲತ್ತು ಸಿಗುವುದಿಲ್ಲ. ಬೆಂಗಳೂರಿನಲ್ಲಿರುವವರು ಅವರ ಮಕ್ಕಳನ್ನು ಇಂಜಿನಿಯರ್ ಮತ್ತು ಡಾಕ್ಟರ್ ಓದಿಸಲಿಕ್ಕೆ ಸೀಟು ತೆಗೆದುಕೊಳ್ಳುತ್ತಾರೆ. ನಿಜವಾಗಿ ಓದಿದವರಿಗೆ ಯಾವುದೇ ಸವಲತ್ತುಗಳು ಸಿಗುವುದಿಲ್ಲ. ಯಾವುದೇ ಸೀಟು ಸಿಗುವುದಿಲ್ಲ.

ಶ್ರೀ ಜಿ. ರಾಜುಗೌಡ.—ಶೂನ್ಯವೇಳೆಯಲ್ಲಿ ಒಂದು ಗಹನವಾದ ವಿಷಯವನ್ನು... ...

ಅಧ್ಯಕ್ಷರು.—ಈ ಸಭೆಯಲ್ಲಿ ಶೂನ್ಯವೇಳೆಯೇ ಇಲ್ಲ, ಸಭೆ ಕಾರ್ಯಕಲಾಪದಿಂದ ತುಂಬಿದೆ.

ರಾಜ್ಯದ ರೈತರಿಗೆ ಬಡ್ಡಿ ಸಹಾಯಧನ ಒದಗಿಸಂವ ಬಗ್ಗೆ

ಶ್ರೀ ಜಿ. ರಾಜುಗೌಡ.—ನಿನ್ನೆತ್ತಿನ ಪ್ರಜಾವಾಣಿ ಪತ್ರಿಕೆಯಲ್ಲಿ ''ಆಪೆಕ್ಸ್ ಬ್ಯಾಂಕ್‌ಗೆ ನಬಾರ್ಡ್ ಪುನರ್‌ಧನ ನೀಡಿಕೆ ಮತ್ತೆ ಬಂದ್'' ಆಯಸ್ಯ ಪತ್ರದಲ್ಲಿ ''ರೈತರಿಗೆ ಬಡ್ಡಿ ಸಹಾಯಧನ'' ಆದರಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರು ಪಡೆದುಕೊಂಡಿರುವ ಬೆಳೆ ಸಾಲಕ್ಕೆ ಸಂಬಂಧಿಸಿದಂತೆ ಬಡ್ಡಿ ಸಹಾಯಧನ ಒದಗಿಸುವ ಒಂದು ಹೊಸ ಯೋಜನೆಯನ್ನು ಜಾರಿಗೆ ತಂದು ಅದನ್ನು ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆಯೆಂದು ಹೇಳಲಾಗಿದೆ. ನಬಾರ್ಡ್‌ನವರು ಹಣ ಕೊಡದಿದ್ದರೆ ಸರ್ಕಾರ ಹಾಕಿಕೊಂಡಿರತಕ್ಕ ಯೋಜನೆಯನ್ನು ಕೈಬಿಡಲಾಗುವುದೆ? ಇದರಿಂದ ರಾಜ್ಯದ ರೈತರಿಗೆ ಅನ್ಯಾಯವಾಗುತ್ತದೆ. ಇದು ರಾಜ್ಯದ ರೈತರಿಗೆ ಅನ್ವಯವಾಗುತ್ತದೆಯೇ?

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೆ, ನಿನ್ನೆ ನಾವು ಸಾಲ್ಕೈದು ಜನ ಸದಸ್ಯರು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ, ನಬಾರ್ಡ್‌ನವರು ಸಾಲ ಕೊಡುವುದನ್ನು ಸ್ಟಾಪ್ ಮಾಡುತ್ತೇವೆಂದು ಸರ್ಕಾರಕ್ಕೆ ಪತ್ರ ಬರೆದಿದ್ದಾರೆಂದು ಗೊತ್ತಾಗಿದೆ. ಅದರ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ ನಬಾರ್ಡ್‌ನ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ನಾವು ಕಳುಹಿಸಿದ ನಿಲುವಳಿ ಸೂಚನೆಯನ್ನು ಕಾಲಿಂಗ್ ಅಟೆನ್‌ಷನ್ ಆಗಿ ಪರಿವರ್ತನೆ ಮಾಡಿದ್ದಾರೆಂದು ಗೊತ್ತಾಯಿತು.

ಅಧ್ಯಕ್ಷರು. ನಾನು ತಿಳಿದಿದ್ದ ನಿಲುವಳಿ ಸೂಚನೆಗಳನ್ನು ಕಳುಹಿಸುವುದು ವಿರೋಧ ಪಕ್ಷಗಳಿಗೆ ಸೇರಿದ್ದಾದು ಎಂದು. ಈಗ ಆಡಳಿತ ಪಕ್ಷದವರು ನಿಲುವಳಿ ಸೂಚನೆಗಳನ್ನು ಕಳುಹಿಸಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಾಲಿಂಗ್ ಅಟೆನ್‌ಷನ್ ಎಂದು ಕಳುಹಿಸಿದ್ದೇವೆ.

ಅಧ್ಯಕ್ಷರು.—ಮಾನ್ಯ ವೆಂಕಟಪ್ಪನವರು ನಿಲುವಳಿ ಸೂಚನೆ ಕಳುಹಿಸಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ನಮ್ಮ ಕಡೆಯ ಸದಸ್ಯರುಗಳನ್ನು ಕರೆಯಿಸಿಕೊಂಡು ಮಾನ್ಯ ಹೆಗಡೆಯವರು ಮಾತನಾಡಿಕೊಂಡು ಕಳಿಸಿದ್ದಾರೆ. ಅವರಿಗೆ ಪ್ಲಾನಿಂಗ್ ಕಮಿಷನ್‌ನಲ್ಲಿ ಬೇಕಾದಷ್ಟು ಕೆಲಸವಿದೆ. ಅವರಿಗೆ ಅಲ್ಲಿ ಫುಲ್‌ಟೈಮ್ ಕೆಲಸವಿದೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಪಶ್ಚಿಮಬಂಗಾಳದಿಂದ ಗುಜರಾತ್‌ನವರೆಗೆ ಎಲ್ಲಾ ಸ್ಟೇಟ್‌ಗಳನ್ನು ನೋಡಿಕೊಂಡು ಹೋಗುವುದು ಬಿಟ್ಟು, ಇಲ್ಲಿ ರಾಜ್ಯಸಭೆ ಚುನಾವಣೆ ಬಂದಿದೆಯೆಂದು ಬಂದು ಸರಿಯಾಗಿ ಇಲ್ಲಿ ಕುಳಿತು ಒಬ್ಬೊಬ್ಬರನ್ನು ಕರೆಯಿಸಿ ಮಾತನಾಡುತ್ತಿದ್ದಾರೆ. ಇಲ್ಲಿಗೆ ಸುಮಾರು ೨೫ ಜನ ಆಯಿತು. ಈಗ ಸೀಟು ಬದಲಾಯಿಸುತ್ತಾ ಇದ್ದಾರೆ. ಜಯವಿಟ್ಟು ಅವರನ್ನು ಆ ಕೆಲಸಕ್ಕೆ ಹೋಗಿಯೆಂದು ಹೇಳಿದರೆ ಚೆನ್ನಾಗಿರುತ್ತದೆ.

ಶ್ರೀ ವಾಟಾಳ್ ನಾಗರಾಜ್.—೧೮೭ ಜನ ಶಾಸಕರು ನಿಮ್ಮಲ್ಲಿರುವಾಗ ನಿಮಗೆ ಭಯ ಏತಕ್ಕೆ ಬರಬೇಕು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮಗೆ ಭಯವಿಲ್ಲ. ಆದರೆ ಕಾನ್ಸಿಪ್ಟಿರೆಸಿ ಆಗಬಾರದಂ.

ಶ್ರೀ ವಾಟಾಳ್ ನಾಗರಾಜ್.—ನಿಮಗೆ ಭಯ ಬಂದಿದೆ. ಬಾರೀ ಭಯ ಆಗಿದೆ ತಮ್ಮಲ್ಲಿ ಬಹುತೇಕ ಬದಲಾವಣೆಯಾಗಬಹುದು. ರಾಜ್ಯಸಭಾ ಚುನಾವಣೆಯಲ್ಲಿ ಬದಲಾವಣೆಯಾಗಬಹುದು.

ಶ್ರೀ ಕೆ. ಹೆಚ್. ರಂಗನಾಥ್.—ಭಯ ಇಲ್ಲ. ಕೆಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದು ಆಷ್ಟೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ಮನೆಯಲ್ಲಿ ಶಾಸಕರು ಭೇಟಿಯಾಗುವುದಕ್ಕೆ ಬಂದಿದ್ದಾರೆ. ಲಾಬಿಯಲ್ಲಿ ಅಲ್ಲ, ಅಥವಾ ನಮ್ಮ ಮನೆಯಲ್ಲಿ ಅಲ್ಲ. ಆದ್ದರಿಂದ ಯಾವ ಉದ್ದೇಶಕ್ಕೆ ಬಂದಿದ್ದಾರೋ ಅದರ ಬಗ್ಗೆ ಆನುಮಾನ ಏತಕ್ಕೆ ಪಡುತ್ತಾರೋ ನನಗೆ ಗೊತ್ತಾಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಹೆಗಡೆಯವರನ್ನು ನೋಡಿ. ನನಗಂತೂ ವೈಯಕ್ತಿಕವಾಗಿ ಬಹಳ ಸಂತೋಷವಾಗಿದೆ. ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದರೂ ಕೂಡ ಈ ಸದನದ ಸದಸ್ಯರಾಗಿ ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸುವುದಕ್ಕೆ ಬಂದಿರುವುದಕ್ಕಾಗಿ ನನಗೆ ಬಹಳ ಸಂತೋಷ. I would like to see him more often in this House.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಬಂದಿರುವುದಕ್ಕೆ ಸಂತೋಷ. ಈ ಸಭೆಯ ಕಾರ್ಯಕಲಾಪದಲ್ಲಿ ಭಾಗವಹಿಸಿ ನಮಗೆ ಸಲಹೆ ಕೊಟ್ಟು ಸಹಾಯ ಮಾಡಿದರೆ ಬಹಳ ಸಂತೋಷ. ಅದರೆ ಬೇರೆ ಕೆಲಸಗಳಿಗೆ ಬಂದಿದ್ದಾರೇನೋ ಎಂದು ನನಗನ್ನಿಸುತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ೫೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಬಳ್ಳಾರಿ ಜಿಲ್ಲೆಯನ್ನು ಸೇರಿಸಿ ಅಂದರೆ ಅದಕ್ಕೆ ನೀವು ತಯಾರು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನು ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿಲ್ಲ. ತಮಗೆ ಗೊತ್ತಿದೆ, ನಾವೇ ರಿಪೋರ್ಟ್ ಕೊಟ್ಟಿದ್ದೇವೆ. ನಮ್ಮ ರಿಪೋರ್ಟ್‌ನ ಆಧಾರದ ಮೇಲೆ ಅದು ಬಂದದ್ದು ಇದೆ.

೧೧-೩೦ ಎ. ಎಂ.

ಶ್ರೀ ವಾಟಾಳ್ ನಾಗರಾಜ್.—ನಬಾರ್ಡ್ ವಿಷಯದ ಬಗ್ಗೆ ಸರ್ಕಾರದ ಪರವಾಗಿ ಉತ್ತರ ಹೇಳಲಿಲ್ಲ. ಭಯಂಕರವಾದ ಸುದ್ದಿ ಎಲ್ಲಾ ಪತ್ರಿಕೆಗಳಲ್ಲಿ ಇವತ್ತು ಬಂದಿದೆ.

ಅಧ್ಯಕ್ಷರು.—ಈಗ ಶ್ರೀ ಹನುಮೇಗೌಡರು ಹೇಳಲಿ.

† ಶ್ರೀ ಕೆ. ಎಚ್. ಹನುಮೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ತೊಂದರೆಯಲ್ಲಿರತಕ್ಕಂಥ ರೈತರಿಗೆ ಈ ಕ್ರಾಪ್‌ಲೋನ್ ಹೋದವರ್ಷ ರಾಜ್ಯ ಸರ್ಕಾರದವರು ಕೊಟ್ಟರು. ಈ ಪರ್ಷ ಕೊಡುವ ಬಗ್ಗೆ ಇಂಟರೆಸ್ಟ್ ಸಬ್ಸಿಡಿ ಕೊಡುತ್ತೇವೆ ಎಂದು ಸರ್ಕಾರ ನಿಲುವು ತೆಗೆದುಕೊಂಡರೆ ನಬಾರ್ಡ್‌ನವರು ರಿಫೈನಾನ್ಸ್ ಮಾಡುವುದಿಲ್ಲ ಎಂದು ಆದೇಶ ಕೊಡುವುದನ್ನು ನೋಡಿದರೆ ಈ ಹಣ ಪೂರ್ತಿಯಾಗಿ ಅವರದ್ದೇ ಏನು ? ನಬಾರ್ಡ್‌ನವರಲ್ಲಿ ಇರತಕ್ಕಂಥ ಹಣ ಈ ದೇಶದ ಜನ ಕೊಟ್ಟ ತೆರಿಗೆಯ ಹಣ ಅಲ್ಲವೇನು ? ಅವರು ಈ ರೀತಿ ಸರ್ವಾಧಿಕಾರದ ಧ್ವನಿಯಲ್ಲಿ ಮಾತನಾಡುವುದನ್ನು ನೋಡಿದರೆ ಇದೇನು ಅವರು ಸರ್ಕಾರವನ್ನು ಹೆದರಿಸುವುದಕ್ಕೆ ಮಾಡಿದ್ದಾರೆಯೇ ? ಅಥವಾ ಈ ದೇಶದ ರೈತನಿಗೆ ಯಾವ ವಿಧವಾದ ಹಕ್ಕೂ ಇಲ್ಲವೆಂದು ಹೇಳುವ ಅವರ ರೀತಿಯನ್ನು ನೋಡಿದರೆ ಯಾವ ಡಿಕ್ಟೇಟರ್ ಬಾಯಲ್ಲೂ ಬಹುಶಃ ಇಂತಹ ಮಾತು ಬರುವುದಿಲ್ಲ. ಹಿಟ್ಲರ್ ಸಹಿತ ಈ ರೀತಿಯ ಮಾತನ್ನು ಹೇಳಲಿಕ್ಕಿಲ್ಲವೆಂದು ನನಗನ್ನಿಸುತ್ತದೆ. ಇಷ್ಟೊಂದು ಬೇಜವಾಬ್ದಾರಿಯಿಂದ ಈ ಅಧಿಕಾರಿಗಳು ಈ ಸೂಚನೆಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿರುವುದನ್ನು ನೋಡಿದರೆ ಇದಕ್ಕಿಂತಲೂ ಖಂಡನಾರ್ಹವಾದ ವಿಚಾರ ಬೇರೆ ಇಲ್ಲವೆಂದು ನನಗನ್ನಿಸುತ್ತದೆ ಈ ರಾಜ್ಯದ ಸರ್ಕಾರಕ್ಕೆ ಯಾರಿಗೆ ಏನು ಕೊಡಬೇಕು, ಬಿಡಬೇಕು ಎನ್ನುವುದರ ಬಗ್ಗೆ ಜವಾಬ್ದಾರಿ ಇದೆ. ರೈತರ ಸಾಲ ಮನ್ನಾ ಮಾಡಬೇಕು. ಮನ್ನಾ ಮಾಡಬೇಕು ಎಂದು ವರ್ಷಾನುಗಟ್ಟಲೆಯಿಂದ ಹೇಳುತ್ತಿರುವಾಗ, ಸರ್ಕಾರ ಕೇವಲ ಇಂಟರೆಸ್ಟ್ ಸಬ್ಸಿಡಿ ಕೊಡುತ್ತೇವೆ ಎಂದು ಹೇಳಿದರೆ. ನಾವು ರಿಯಂಬರ್ಸ್ ಮಾಡುವುದಿಲ್ಲವೆಂದು ನಬಾರ್ಡ್‌ನ ಅಧಿಕಾರಿಗಳು ಹೇಳುವಾಗ ಇಂತಹ ಅಧಿಕಾರಿಗಳನ್ನು ನಬಾರ್ಡ್‌ನಲ್ಲಿ ಇಟ್ಟುಕೊಂಡರೆ ಈ ದೇಶದ ರೈತರ ಹಿತವನ್ನು ಕಾಪಾಡುವಂಥ ಔದಾರ್ಯ ಇವರಿಗೆ ಇದೆಯಾ ? ಏತಕ್ಕೋಸ್ಕರ ಅವರು ಹಾಗೆ ಹೇಳಿದರು ? ಇದರ ಬಗ್ಗೆ ಸದನ ಕಂಡಮ್ ಮಾಡಿ ಅವರಿಗೆ ಕಾಗದ ಬರೆಯಬೇಕು ಮತ್ತು ಅಂತಹ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಅವರನ್ನು

(† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಆ ಕೆಲಸದಿಂದ ಬಿಡುಗಡೆ ಮಾಡಿ ಯಾವುದಾದರೂ ಹೊರದೇಶದಲ್ಲಿ ಅವರು ಇರುವಹಾಗೆ ಮಾಡಬೇಕೆಂದು ನಾನು ಬಹಳ ಒತ್ತಾಯದಿಂದ ಸರ್ಕಾರವನ್ನು ಕೇಳುತ್ತೇನೆ. ಮತ್ತು ಇವರ ಬಗ್ಗೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಂಡಿದ್ದಾರೆ ಮತ್ತು ಏನು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಇಲ್ಲಿ ಉತ್ತರ ಕೊಡಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಹನುಮೇಗೌಡರು ಕೇಳಿರತಕ್ಕಂಥ ಪ್ರಶ್ನೆಗೆ.....

ಶ್ರೀ ಎಂ ವಿ. ವೆಂಕಟಪ್ಪ.—ನಾನೂ ಸಹ ಕೇಳಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಶ್ರೀ ಹನುಮೇಗೌಡರು ಮೂತನಾಡಿದ್ದನ್ನು ನಾನು ಕೇಳಿದೆ. ಜಾಗತಿಕ ಬ್ಯಾಂಕ್‌ನವರು ಈ ರೀತಿ ಹೇಳತಕ್ಕದ್ದು ಧರ್ಮ ಅಲ್ಲ, ಈ ರೀತಿ ಹೇಳಿಕೆ ಕೊಡತಕ್ಕಂಥ ಅಧಿಕಾರಿಗಳನ್ನು ಹೊರಹಾಕಿ ಕೆಲಸ ಮಾಡಬೇಕೆಂದು ಮತ್ತು ಅಂತಹ ಸ್ಟೆಪ್ಸ್ ಸರ್ಕಾರ ತೆಗೆದುಕೊಳ್ಳಬೇಕೆಂದು ಅವರು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಜಾಗತಿಕ ಬ್ಯಾಂಕ್ ರಾಜ್ಯಸರ್ಕಾರದ ಅಧೀನದಲ್ಲಿ ಇಲ್ಲ. ಇದನ್ನು ನಾನು ಅವರಿಗೆ ಸ್ಪಷ್ಟಪಡಿಸುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ದೀರ್ಘವಾದ ಹೇಳಿಕೆಯನ್ನು ಕೊಡುವವರಿದ್ದಾರೆ. ಆದ್ದರಿಂದ ಈ ಪ್ರಶ್ನೆಯನ್ನು ಮುಂದಕ್ಕೆ ಇಟ್ಟುಕೊಳ್ಳೋಣ.

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆಗಳು ಶ್ರೀ ಶಂಕರರೆಡ್ಡಿಯವರು ಇಲ್ಲ, ಶ್ರೀ ವೀರಭದ್ರಪ್ಪನವರು ಇದ್ದಾರೆ. ಆದರೆ ಇದಕ್ಕೆ ಉತ್ತರ ಕೊಡತಕ್ಕಂಥ ಮುಖ್ಯ ಮಂತ್ರಿಗಳು ಬಂದಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ನಾನು ಪೂರ್ತಿ ಹೇಳಿರಲಿಲ್ಲ. ಈ ಒಂದು ಪ್ರೊಸಿಜರಲ್ ಮ್ಯಾಟರ್ ಬಗ್ಗೆ ಹೇಳಬೇಕೆಂದರೆ ಈ ಹೌಸ್‌ನಲ್ಲಿ ಐದಾರು ದಿವಸಗಳಿಂದ ನಾನು ಗಮನಿಸುತ್ತಿದ್ದೇನೆ. ಇಲ್ಲಿ ಬರುವ ಉತ್ತರಗಳಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿಗಳ ಹೆಸರು ಬರುತ್ತದೆಯೇ ವಿನಹ ಆದಕ್ಕೆ ಮಂತ್ರಿಗಳ ಹೆಸರಾಗಲೀ ಇರುವದಿಲ್ಲ. ಅಧೀನ ಕಾರ್ಯದರ್ಶಿಗಳಾಗಲೀ, ಕಾರ್ಯದರ್ಶಿಗಳಾಗಲೀ they are not responsible to this house. They have no locus standi to place replies on the floor of the House. Cabinet is responsible to place the reply on the floor of the House or on the table of the House. ಏಕೆಂದರೆ ಈ ಸಮಸ್ಯೆ ನಾನು ಹಿಂದೆ ಸಭಾಪತಿಯಾಗಿದ್ದಾಗ ಒಂದು ಸಲ ಬಂದಿತ್ತು. ಅಧೀನ ಕಾರ್ಯದರ್ಶಿಗಳಾಗಲೀ, ಕಾರ್ಯದರ್ಶಿಗಳಾಗಲೀ ಉತ್ತರಗಳನ್ನು ಕೊಡುವುದಕ್ಕೆ ಹಕ್ಕು ಇಲ್ಲ.....

MR. SPEAKER.—Let me have a look at that.

SRI M. V. VENKATAPPA.—They have no locus stnadi. Only the Ministers, and the Chief Minister, have the responsibility to lay any paper or answer the question according to the Constitution. ಅದಕ್ಕೋಸ್ಕರ ನನ್ನ ಪ್ರಶ್ನೆ ಇಷ್ಟೇ. ನಾನು ಸಭಾಪತಿಯಾಗಿದ್ದಾಗ ವಿರೋಧಪಕ್ಷದವರು ಇದನ್ನು ಸಭೆಯ ಮುಂದಿಟ್ಟಾಗ ಮಾರನೆಯ ದಿವಸದಿಂದಲೇ ಈ ಪ್ರೊಸಿಜರ್ ಅನ್ನು ಬದಲಾವಣೆ ಮಾಡಿದೆವು. ಮಂತ್ರಿಗಳೇ ಸಹಿಮಾಡಬೇಕೂ, ಅವರೇ ಉತ್ತರಕೊಡಬೇಕೆಂದು ಬದಲಾವಣೆಯಾಯಿತು. ಅಂಡರ್ ಸೆಕ್ರೆಟರಿಯಾಗಲೀ, ಜಾಯಿಂಟ್ ಸೆಕ್ರೆಟರಿಯಾಗಲೀ, ಸೆಕ್ರೆಟರಿಯಾಗಲೀ ಸಹಿಮಾಡುವುದು ಈ ಸಭೆಯ ಗೌರವಕ್ಕೆ ಧಕ್ಕೆಯಾಗುತ್ತದೆ ಎಂದು ಹೇಳಿದಾಗ ಆಮೇಲೆ ಸರ್ಕಾರದವರು ಇದನ್ನು ಬದಲಾವಣೆ ಮಾಡಿದ್ದರು.

MR. SPEAKER.—I entirely agree with the point raised by the hon. member Sri. M. V. Venkatappa. They have absolutely no role to play in the deliberations of this House and the Ministers themselves will have to affix the signature while furnishing the answers to this august House. I notice the lapse. I am sure the necessary correctives will be effected.

ಶ್ರೀ ಬಿ ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಎಂ.ವಿ. ವೆಂಕಟಪ್ಪನವರು ಎತ್ತಿರತಕ್ಕ ಪ್ರಶ್ನೆ ಏನಿದೆ, ಇದನ್ನು ಬಹಳ ವರ್ಷಗಳಿಂದ ಕೇಳುತ್ತಲೇ ಬಂದಿದ್ದೇವೆ. ಸರ್ಕಾರದಲ್ಲಿ ಸಂಬಂಧಪಟ್ಟ ಮಂತ್ರಿಗಳಾಗಿರುವವರು ಮಾತ್ರ, ಈ ಉತ್ತರದ ಪ್ರತಿಗಳಿಗೆ ರುಜು ಹಾಕಬೇಕೇ ಹೊರತು, ಅಂಡರ್ ಸೆಕ್ರಟರಿಗಳಾಗಲೀ, ಅಥವಾ ಡೆಪ್ಯೂಟಿ ಸೆಕ್ರಟರಿಗಳಾಗಲೀ ರುಜು ಹಾಕಬಾರದು. ಏಕೆಂದರೆ, ಮಂತ್ರಿಗಳು ವಿಧಾನ ಸಭೆಗೆ ಉತ್ತರ ಕೊಡುತ್ತಾರೆ. ಆದ್ದರಿಂದ ಇನ್ನು ಮೇಲೆ ಸರ್ಕಾರದ ಮಂತ್ರಿಗಳು ಮಾತ್ರ ಉತ್ತರ ಪಟ್ಟಿಗಳಿಗೆ ಸಹಿ ಹಾಕಬೇಕು. ಇದನ್ನು ಸರ್ಕಾರದ ವತಿಯಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು.—Thank you very much. ಈಗ ಗಮನ ಸೆಳೆಯುವ ಸೂಚನೆಗಳು, ಮೊದಲನೆಯದು ಶ್ರೀ ಎಂ. ಶಂಕರರೆಡ್ಡಿಯವರದು, ಇದನ್ನು ಇನ್ನೊಂದು ದಿವಸ ತೆಗೆದುಕೊಳ್ಳೋಣ. ಇದರ ಜೊತೆಗೆ, ಇನ್ನೂ ಎರಡು ಗಮನ ಸೆಳೆಯುವ ಸೂಚನೆಗಳು ಇವೆ, ಇವು ಮುಂಗಿಯುವುದರೊಳಗಾಗಿ, ಮಾನ್ಯ ಮುಖ್ಯಮಂತ್ರಿಗಳು ಬಂದರೆ, ಅದನ್ನೂ ತೆಗೆದುಕೊಳ್ಳೋಣ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಗಮನ ಸೆಳೆಯುವ ಸೂಚನೆಗೆ, ಮಾನ್ಯ ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಇರುವುದರಿಂದ, ಈಗ ಮೂರನೆಯ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ. ಆನಂತರ ನಿಮ್ಮದನ್ನು ತೆಗೆದುಕೊಳ್ಳೋಣ. ಈಗ ಮಾನ್ಯ ಡಿ. ಬಿ. ಚಂದ್ರೇಗೌಡರು ಮಾನ್ಯ ಮಂತ್ರಿಗಳ ಗಮನ ಸೆಳೆಯಿರಿ.

ಗಮನ ಸೆಳೆಯುವ ಸೂಚನೆಗಳು

೧) ಕರ್ನಾಟಕ ಹಾಲು ಉತ್ಪಾದಕ ಮಹಾಮಂಡಳಿಯಲ್ಲಿನ ಸಾಮೂಹಿಕ ವರ್ಗಾವಣೆ

ಶ್ರೀ ಡಿ. ಬಿ. ಚಂದ್ರೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ಹಾಲು ಉತ್ಪಾದಕ ಮಹಾ ಮಂಡಳಿಯಲ್ಲಿನ ಸಾಮೂಹಿಕ ವರ್ಗಾವಣೆಯ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಶುಸಂಗೋಪನಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಹೇಳಿಕೆ ಇಂಗ್ಲಿಷ್‌ನಲ್ಲಿದೆ. ತರ್ಜುಮೆ ಮಾಡಿಲ್ಲ. ಕ್ಷಮಿಸಬೇಕು. ಅದನ್ನು ಓದುತ್ತೇನೆ.....

ಶ್ರೀ ವಾಟಾಳ್ ನಾಗರಾಜ್.—ದಯವಾಡಿ ಕನ್ನಡದಲ್ಲಿ ಹೇಳಿ, ಇಂಗ್ಲೀಷಿನಲ್ಲಿರುವುದನ್ನೇ ಕನ್ನಡದಲ್ಲಿ ಹೇಳಿ. ಮತ್ತೆ ಮತ್ತೆ ಈ ಚಾಳಿ ಬೇಡ. ಇದು ಖಂಡಿತ ಆಗುವುದಿಲ್ಲ.

MR. SPEAKER.—I cannot force anybody to speak in a particular language.

ಶ್ರೀ ಬಿ. ಬಸವಲಿಂಗಪ್ಪ.—(ಗ್ರಾಮಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ಪಶುಸಂಗೋಪನಾ ಮಂತ್ರಿಗಳು).—ಇವತ್ತು ಒಂದು ದಿವಸ ಕನ್ನಡದಲ್ಲಿ ಹೇಳುವುದಕ್ಕಾಗುವುದಿಲ್ಲ. ಇದು ಇಂಗ್ಲೀಷಿನಲ್ಲಿರುವುದರಿಂದ ಇಂಗ್ಲೀಷಿನಲ್ಲಿಯೇ ಹೇಳುತ್ತೇನೆ.

The Government of Karnataka has contributed share capital of Rs. 6.00 crores (Rupees Six Crores) in Karnataka Dairy Development Corporation and Rs. 2.01 crores (Two crores one Lakh) in Karnataka Milk Products Ltd The total amount of Rs. 8.00 crores (eight crores) has been ordered for transfer to Karnataka Milk Federation. Thus, as against Rs. 10.00 crores (Rupees Ten Crores) of equity capital of Karnataka Milk Federation, Rs. 8.00 crores are held by the Government of Karnataka and Rs. 13.22 lakhs are held by the District Milk Unions. In addition, the Government of India has paid towards the equity of Rs. 2.99 crores for which shares to the extent of Rs. 2.64 crores are to be issued by the Karnataka Milk Federation.